# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದಂ.ನ್ಯಾ.ದಂ.ರವರ ನ್ಯಾಯಾಲಯ, ತಿಪಟೂರು.

## ಸಿ.ಸಿ.ನಂ. 351/201

**ಪಿರ್ಯಾದುದಾರರು** : ಮೆ.. ಶ್ರೀ ಗುರುಕುಲ ಕೊ-ಆಪರೇಟೀವ್ ಸೊಸೈಟಿ ಲಿಮಿಟೆಡ್, ತಿಪಟೂರು

**ವಿರುದ್ಧ**

**ಆರೋಪಿ** : H.N. ಜಗದೀಶ್ ಬಿನ್ ನಂಜಾಮರಿ,
ವಯಸ್ಸು 50 ವರ್ಷ, ಹೊಗವನಘಟ್ಟ,
ದಸರೀಘಟ್ಟ ಅಂಚೆ, ತಿಪಟೂರು ತಾಲ್ಲೂಕು.

### <u>ಆರೋಪಣೆ</u>

ಶ್ರೀ ಸತೀಶ್. ಎಸ್.ಟಿ., ಬಿ.ಕಾಂ., ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದಂ.ನ್ಯಾ.ದಂ., ತಿಪಟೂರು ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ವಿರುದ್ಧ ಮಾಡುತ್ತಿರುವ ಆರೋಪಣಾ ಸಾರಾಂಶವೇನೆಂದರೆ:

ಮೇಲ್ಕಂಡ ಆರೋಪಿಯಾದ ನೀವು ಪಿರ್ಯಾದಿಯವರಿಂದ **ರೂ.25,000/-** ಗಳನ್ನು ಶೇಕಡ 18% ಬಡ್ಡಿಯಂತೆ ಒಪ್ಪಿ ಸಾಲವಾಗಿ ಪಡೆದಿದ್ದು, ಸದರಿ ಸಾಲದ ಅಸಲು ಮತ್ತು ಬಡ್ಡಿಯ ತೀರುವಳಿ ಸಲುವಾಗಿ ತಿಪಟೂರು ರಂಗಾಪುರ ಶಾಖೆಯ **Primary Agricultural Co-Opertive Bank Ltd.,** ಬ್ಯಾಂಕಿನ ದಿಃ **06.02.2019** ರ **ರೂ.68,500/- ಗಳಿಗೆ ಚೆಕ್ ನಂ.161** ನ್ನು ಪಿರ್ಯಾದಿ ಪರವಾಗಿ ವಿತರಿಸಿದ್ದು, ನಂತರ ಪಿರ್ಯಾದಿಯವರು ಸದರಿ ಚೆಕ್ಕನ್ನು ತಿಪಟೂರು ಶಾಖೆಯ ಟಿ.ವಿ.ಸಿ. ಬ್ಯಾಂಕಿಗೆ ನಗದೀಕರಣಕ್ಕಾಗಿ ಸಲ್ಲಿಸಿದಾಗ ಸದರಿ ಬ್ಯಾಂಕಿನವರು **ಚೆಕ್.ದಾತರ ಖಾತೆಯಲ್ಲಿ ಸಾಕಷ್ಟು ಹಣ ಲಭ್ಯವಿಲ್ಲ (Funds insufficient)** ಎಂದು ತಿಳಿಸಿ ದಿಃ 11.02.2019 ರಂದು ಹಿಂಬರಹದೊಂದಿಗೆ ಸದರಿ ಚೆಕ್ಕನ್ನು ಪಿರ್ಯಾದಿಗೆ ಹಿಂದಿರುಗಿಸಿದ್ದು, ತದನಂತರ ಪಿರ್ಯಾದುದಾರರು ಅವರ ವಕೀಲರ ಮೂಲಕ ದಿಃ 26.02.2019 ರಂದು ನೊಂದಾಯಿತ ಅಂಚೆ ಮೂಲಕ ಆರೋಪಿಯಾದ ನಿಮಗೆ ಹಣ

ತಗಾದೆ ಮಾಡಿ ನೋಟೀಸ್ ಕಳುಹಿಸಿದ್ದು, ಸದರಿ ನೋಟೀಸ್ ನಿಮಗೆ ದಿಃ12.03.2019 ರಂದು ಜಾರಿಯಾಗಿದ್ದು, ಅದಾದ ನಂತರವೂ ಸಹ ಆರೋಪಿಯಾದ ನೀವು ಪಿರ್ಯಾದಿಗೆ ಸಾಲದ ಹಣವನ್ನು ಮರುಪಾವತಿಸಿರುವುದಿಲ್ಲ ಹಾಗೂ ಪಿರ್ಯಾದಿಗೆ ಮೋಸ ಮಾಡುವ ಉದ್ದೇಶದಿಂದ ಸದರಿ ಚೆಕ್ಕನ್ನು ಪಿರ್ಯಾದಿ ಪರವಾಗಿ ವಿತರಿಸಿದ್ದು, ಸದರಿ ನಿಮ್ಮ ಕೃತ್ಯವು **ವ್ಯವಹರಣೀಯ ಲಿಖಿತಗಳ ಅಧಿ ನಿಯಮ ಕಲಂ. 138** ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವಾಗಿರುತ್ತದೆ ಎಂದು ನಿಮ್ಮ ಮೇಲೆ ಆರೋಪಿಸಲಾಗಿದೆ.

**ಸಹಿ/-**
**(ಸತೀಶ್. ಎಸ್.ಟಿ.)**
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದಂ.ನ್ಯಾ.ದಂ.,
ತಿಪಟೂರು

**<u>ಆರೋಪಿಯ ಹೇಳಿಕೆ</u>**

ಪ್ರಶ್ನೆ:1) ಇದೀಗ ಓದಿ ಹೇಳಿದ ಆರೋಪಣಾ ಸಾರಾಂಶವು ನಿಮಗೆ ಅರ್ಥವಾಯಿತೇ?
ಉತ್ತರ:-

ಪ್ರಶ್ನೆ:2) ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ?
ಉತ್ತರ:-

(ದಿನಾಂಕ: **<u>20.09.2019</u>** ರಂದು ತೆರೆದ ನ್ಯಾಯಾಲಯದಲ್ಲಿ ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿದ್ದು, ಮೇಲಿನ ಪ್ರಶ್ನೆಗಳಿಗೆ ಅವರು ನೀಡಿದ ಉತ್ತರಗಳನ್ನು ಪಡೆದು ಯಥಾವತ್ತಾಗಿ ನನ್ನಿಂದ ದಾಖಲು ಮಾಡಿಕೊಳ್ಳಲಾಯಿತು)

**ಸಹಿ/-**
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದಂ.ನ್ಯಾ.ದಂ.,
ತಿಪಟೂರು